# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **247**

ಸದಸ್ಯರ ಹೆಸರು : **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 28-01-2026

| | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯದಲ್ಲಿ ಸಾರಿಗೆ ಮತ್ತು ಸರಕು ಸಾಗಾಣಿಕೆ ವಾಹನಗಳ ಸುರಕ್ಷತೆಗಾಗಿ ಜಾರಿಯಲ್ಲಿರುವ ನಿಯಮಗಳು ಯಾವುವು; ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಸಾರಿಗೆ ಇಲಾಖೆ ಯಾವ ಯಾವ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದೆ; | ರಾಜ್ಯದಲ್ಲಿ ನೋಂದಾಯಿಸುವ ಸಾರಿಗೆ ಮತ್ತು ಸರಕು ಸಾಗಾಣಿಕೆ ವಾಹನಗಳನ್ನು ಕೇಂದ್ರ ಮೋಟಾರು ವಾಹನ ಕಾಯ್ದೆ 1988, ಕೇಂದ್ರ ಮೋಟಾರು ವಾಹನ ನಿಯಮಾವಳಿಗಳು 1989 ಹಾಗೂ ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು 1989 ರ ಅನುಸಾರ ಸುರಕ್ಷತಾ ಮಾನದಂಡಗಳನ್ನು ಪೂರೈಸಿರುವಂತಹ ವಾಹನಗಳನ್ನು ಮಾತ್ರ ನೋಂದಾಯಿಸಲು ಕ್ರಮವಹಿಸಲಾಗುತ್ತಿದೆ.<br><br>ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಾರಿಗೆ ಇಲಾಖೆಯು ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದು, ವಿವರ ಈ ಕೆಳಕಂಡಂತಿದೆ.<br><br>ರಾಜ್ಯದಲ್ಲಿ ಸಂಚರಿಸುವ ಸಾರಿಗೆ ವಾಹನಗಳು ಮತ್ತು ರಾಷ್ಟ್ರೀಯ ರಹದಾರಿ ಹೊಂದಿರುವ ಸರಕು ಸಾಗಣೆ ವಾಹನಗಳ ಸುರಕ್ಷತೆಗಾಗಿ ಈ ಕೆಳಕಂಡ ಕೇಂದ್ರ ಮೋಟಾರು ವಾಹನ ನಿಯಮಾವಳಿಯ 1989 ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ.<br><br>1. ಜಿ.ಪಿ.ಎಸ್ ಪ್ಯಾನಿಕ್ ಬಟನ್, (VLTD) ಗಳ ಅಳವಡಿಕೆ - ನಿಯಮ 125 (H).<br>2. ರಿಫ್ಲೆಕ್ಟಿವ್ ಟೇಪ್ ಅಳವಡಿಕೆ (ನಿಯಮ-104).<br>3. ಪಬ್ಲಿಕ್ ಅಡ್ರೆಸಿಂಗ್ ಸಿಸ್ಟಮ್, ಅಗ್ನಿಶಾಮಕ ಸಾಧನ (ನಿಯಮ-125 C).<br>4. ವೇಗ ನಿಯಂತ್ರಣ ಸಾಧನ (Speed Governor) ಗಳ (ನಿಯಮ-118) ಮತ್ತು<br>5. ಅತಿ ಸುರಕ್ಷತಾ ನೋಂದಣಿ ಫಲಕ (HSRP) (ನಿಯಮ-50) ಗಳ ಅಳವಡಿಕೆಯನ್ನು ಕಡ್ಡಾಯಗೊಳಿಸ-ಲಾಗಿರುತ್ತದೆ.<br><br>ಸಾರಿಗೆ ವಾಹನಗಳ ಸುಸ್ಥಿತಿಯನ್ನು ವೈಜ್ಞಾನಿಕವಾಗಿ ಆಧುನಿಕ ಯಂತ್ರೋಪಕರಣ ಮೂಲಕ ಪರೀಕ್ಷಿಸುವ ಸಂಬಂಧ ಜಿಲ್ಲೆಗೊಂದರಂತೆ ರಾಜ್ಯಾದ್ಯಾಂತ 32 ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳನ್ನು (ATS) ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಪ್ರಸ್ತುತ ರಾಜ್ಯದಲ್ಲಿ 03 ಪರೀಕ್ಷಾ ಕೇಂದ್ರಗಳು ನೆಲಮಂಗಲ (ಬೆಂಗಳೂರು ಗ್ರಾಮಾಂತರ), ಮೈಸೂರು ಮತ್ತು ಧಾರವಾಡದಲ್ಲಿ ಕಾರ್ಯಾಚರಿಸುತ್ತಿವೆ. ಇದರಿಂದ **"ಸಾರಿಗೆ ವಾಹನಗಳ ಫಿಟ್‌ನೆಸ್ ಪರೀಕ್ಷೆಯನ್ನು** |

| | | |
|---|---|---|
| | | **ಮಾನವ ಹಸ್ತಕ್ಷೇಪವಿಲ್ಲದೆ ವಾಹನಗಳನ್ನು ತಪಾಸಣೆ ಮಾಡಿ ವಾಹನದ ಸಮರ್ಥತೆಯನ್ನು ನಿಖರವಾಗಿ ಗುರುತಿಸಿ ದೋಷರಹಿತವಾಗಿ ಅರ್ಹತಾ ಪತ್ರಗಳನ್ನು ನೀಡಲಾಗುತ್ತಿದೆ".**<br><br>ಚಾಲಕರಿಗೆ ಉತ್ತಮ ತರಬೇತಿಯನ್ನು ನೀಡಿ, ಚಾಲನಾ ಕೌಶಲ್ಯವನ್ನು ಅಭಿವೃದ್ಧಿಪಡಿಸಿ ಸಮಾಜಕ್ಕೆ ಗುಣಮಟ್ಟದ ಚಾಲಕರನ್ನು ನೀಡುವ ದೃಷ್ಠಿಯಿಂದ ರಾಜ್ಯದಲ್ಲಿ ಸರ್ಕಾರದ ವತಿಯಿಂದ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.<br><br>ಇದಲ್ಲದೆ, ಕೇಂದ್ರ ಸರ್ಕಾರದ ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯದ ನಿರ್ದೇಶನದಂತೆ ಮೋಟಾರು ವಾಹನ ಕಾಯ್ದೆ 1988ರ ಕಲಂ 136A ಮತ್ತು ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 167Aನ್ನು ಜಾರಿಗೊಳಿಸುವ ದಿಸೆಯಲ್ಲಿ, Electronic Monitoring and Enforcement of Road Safety ರಡಿ Black Spot ಇರುವ ರಾಷ್ಟ್ರೀಯ / ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಹೆಚ್ಚಿನ ಸಂಚಾರ ಸಾಂದ್ರತೆಯ ಜಂಕ್ಷನ್‌ಗಳಲ್ಲಿ (ಒಟ್ಟು 80 ಸ್ಥಳಗಳಲ್ಲಿ) AI ಆಧಾರಿತ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ. ಸಾರಿಗೆ ಇಲಾಖೆಯು ಈಗಾಗಲೇ ರಾಜ್ಯದ 07 ಟೋಲ್ ಪ್ಲಾಜಾಗಳಲ್ಲಿ AI ಆಧಾರಿತ ಕ್ಯಾಮಾರಾಗಳನ್ನು SMART ENFORCEMENT ಯೋಜನೆಯಡಿ ಅಳವಡಿಸಿ ವಾಹನ ಸವಾರರುಗಳಿಗೆ ರಸ್ತೆ ಸುರಕ್ಷತೆ ಜಾಗೃತಿ ಮತ್ತು ತಿಳುವಳಿಕೆ ಮೂಡಿಸುವ (automated smart and road safety awareness sensitization) ಕಾರ್ಯವನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>ಈ ಎಲ್ಲಾ ಉಪಕ್ರಮಗಳಿಂದ ಅಪಘಾತಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುತ್ತದೆ. |
| ಆ. | ಸಾರಿಗೆ ವಾಹನಗಳನ್ನು ಸಂಬಂಧಿತ ಸಾರಿಗೆ ಪ್ರಾಧಿಕಾರಗಳಲ್ಲಿ ಪಾಸಿಂಗ್ ಮಾಡಿದ ನಂತರ, ಅನಧಿಕೃತವಾಗಿ ಆಸನಗಳು, ಲೈಟುಗಳು, ಮೆಟ್ಟಿಲುಗಳು ಹಾಗೂ ಇತರ ರಚನಾತ್ಮಕ ಅಂಶಗಳಲ್ಲಿ ಮಾರ್ಪಾಡುಗಳನ್ನು ಮಾಡದಂತೆ ತಡೆಯಲು ಇಲಾಖೆ ಯಾವ ರೀತಿಯಲ್ಲಿ ಪರಿಶೀಲಿಸುತ್ತಿದೆ; ಇಂತಹ ಅನಧಿಕೃತ ಮಾರ್ಪಾಡುಗಳ ಕುರಿತು ಇದುವರೆಗೆ ಎಷ್ಟು ಪ್ರಕರಣಗಳನ್ನು ಪತ್ತೆಹಚ್ಚಿದೆ; ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ; | ಸಾರಿಗೆ ವಾಹನಗಳ ಅರ್ಹತಾ ಪತ್ರ ನವೀಕರಣದ ನಂತರ (ಪಾಸಿಂಗ್ ಮಾಡಿದ ನಂತರ) ಅನಧಿಕೃತವಾಗಿ ವಾಹನಗಳಲ್ಲಿ ಆಸನಗಳು, ಲೈಟುಗಳು, ಮೆಟ್ಟಿಲುಗಳು ಹಾಗೂ ಇತರೆ ರಚನಾತ್ಮಕ ಅಂಶಗಳಲ್ಲಿ ಮಾರ್ಪಾಡು ಮಾಡಿದ್ದಲ್ಲಿ ಅಂತಹ ವಾಹನಗಳನ್ನು ಪ್ರವರ್ತನ ಸಮಯದಲ್ಲಿ ತಪಾಸಣೆಗೊಳಪಡಿಸಿ ಕೇಂದ್ರ ಮೋಟಾರು ವಾಹನ ಕಾಯ್ದೆ-1988 ರ ಕಲಂ 200 ರಡಿ ನಿಗದಿಪಡಿಸಿರುವಂತೆ ದಂಡವನ್ನು ವಸೂಲಿ ಮಾಡಲು ಕ್ರಮವಹಿಸಲಾಗುತ್ತಿದೆ. ಇಂತಹ ಅನಧಿಕೃತ ಮಾರ್ಪಾಡು ಮಾಡಿರುವ ಒಟ್ಟು 1195 ವಾಹನಗಳನ್ನು ತಪಾಸಣೆಗೊಳಪಡಿಸಿ 1061ರ ಮೇಲೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. |
| ಇ. | ಸಾರಿಗೆ ವಾಹನಗಳಲ್ಲಿ ಬ್ರೇಕ್ ಲೈಟ್, ಹಾರನ್, ನಂಬರ್ ಪ್ಲೇಟ್, ಇಂಡಿಕೇಟರ್, ಹೊಗೆ ತಪಾಸಣೆ ಹಾಗೂ ಇತರೆ ಕಡ್ಡಾಯ ಸುರಕ್ಷತಾ ಉಪಕರಣಗಳು ಸರಿಯಾಗಿ ಅಳವಡಿಸಿರುವುದನ್ನು ಮತ್ತು | ಸಾರಿಗೆ ವಾಹನಗಳಲ್ಲಿ ಬ್ರೇಕ್, ಲೈಟ್, ಹಾರನ್, ನಂಬರ್ ಪ್ಲೇಟ್, ಇಂಡಿಕೇಟರ್, ಹೊಗೆ ಉಪಕರಣಗಳು ಸರಿಯಾಗಿ ತಪಾಸಣೆ ಹಾಗೂ ಇತರೆ ಕಡ್ಡಾಯ ಸುರಕ್ಷತಾ ಉಪಕರಣಗಳನ್ನು ಅಳವಡಿಸಿರುವುದನ್ನು ಮತ್ತು ಕಾರ್ಯ ನಿರ್ವಹಿಸುತ್ತಿರುವುದನ್ನು ಅರ್ಹತಾ ಪತ್ರ |

| | | |
|---|---|---|
| | ಕಾರ್ಯ ನಿರ್ವಹಿಸುತ್ತಿರುವುದನ್ನು ಯಾವ ರೀತಿಯಲ್ಲಿ ದೃಢಪಡಿಸಲಾಗುತ್ತಿದೆ; | ನವೀಕರಣಕ್ಕೆ ಹಾಜರುಪಡಿಸಿದ ಸಂದರ್ಭದಲ್ಲಿ ಭೌತಿಕವಾಗಿ ಪರಿಶೀಲಿಸಿ ದೃಢಪಡಿಸಿಕೊಳ್ಳಲಾಗುತ್ತಿದೆ.<br>ಸಾರಿಗೆ ವಾಹನಗಳ ಸುಸ್ಥಿತಿಯನ್ನು ವೈಜ್ಞಾನಿಕವಾಗಿ ಆಧುನಿಕ ಯಂತ್ರೋಪಕರಣ ಮೂಲಕ ಪರೀಕ್ಷಿಸುವ ಸಂಬಂಧ ಜಿಲ್ಲೆಗೊಂದರಂತೆ ರಾಜ್ಯಾದ್ಯಾಂತ 32 ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳನ್ನು (ATS) ಸ್ಥಾಪಿಸಲು ಕ್ರಮ ವಹಿಸಲಾಗಿದೆ. ಈಗಾಗಲೇ 03 ಅಂತಹ ಪರೀಕ್ಷಾ ಕೇಂದ್ರಗಳು ಕಾರ್ಯಾಚರಿಸುತ್ತಿವೆ. |
| ಈ. | ರಾಜ್ಯದಲ್ಲಿ ಹೆಚ್ಚು ಜನಸಂದಣಿ ಹಾಗೂ ಹೆಚ್ಚಿನ ಜನಸಂಚಾರ ಇರುವ ಪ್ರದೇಶಗಳಲ್ಲಿ, ವೈಯಕ್ತಿಕ ಖಾಸಗಿ ವಾಹನಗಳ ದಟ್ಟನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಹೆಚ್ಚುವರಿ ಸಾರಿಗೆ ಪರವಾನಿಗೆಗಳನ್ನು ನೀಡುವ ಮೂಲಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ, ಇಲಾಖೆ ಕೈಗೊಂಡಿರುವ ಕಾನೂನು ಮತ್ತು ಆಡಳಿತಾತ್ಮಕ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 174 ಸಾಇಪ 2015, ದಿನಾಂಕ:07.03.2019 ರಲ್ಲಿ ಕರ್ನಾಟಕ ರಾಜ್ಯ ಸಮಗ್ರ ಪ್ರದೇಶ ಸಾರಿಗೆ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಅದರಂತೆ ಸಾರಿಗೆ ನಿಗಮಗಳಿಗೆ ಮಾತ್ರ ಹೊಸ ಪರವಾನಿಗೆಗಳನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ರಾಜ್ಯದಲ್ಲಿ ಹೆಚ್ಚು ಜನಸಂದಣಿ ಹಾಗೂ ಹೆಚ್ಚಿನ ಜನಸಂಚಾರ ಪ್ರದೇಶಗಳಲ್ಲಿ ಅವಶ್ಯಕತೆ ಅನುಸಾರವಾಗಿ ಸಾರಿಗೆ ನಿಗಮಗಳು ಸಂಬಂಧಿಸಿದ ಪ್ರಾಧಿಕಾರದಿಂದ ಪರವಾನಿಗೆ ಪಡೆಯಲು ಅವಕಾಶ ಕಲ್ಪಿಸುವ ಮೂಲಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮ ವಹಿಸಲಾಗುತ್ತಿದೆ. |
| ಉ. | ಪ್ರಸ್ತುತ ಜಾರಿಯಲ್ಲಿರುವ ನಿಯಮಗಳ ಪ್ರಕಾರ 15 ವರ್ಷ ಮೀರಿರುವ ಖಾಸಗಿ ವಾಹನಗಳನ್ನು, ಸರ್ಕಾರಿ ವಾಹನಗಳಂತೆ ಗುಜರಿಗೆ ಹಾಕುವ (scrapping) ಪ್ರಕ್ರಿಯೆಯನ್ನು ಜಾರಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; 15 ವರ್ಷ ಮೀರಿರುವ ಖಾಸಗಿ ವಾಹನಗಳು ಇನ್ನೂ ರಸ್ತೆಗಳಲ್ಲಿ ಸಂಚರಿಸುತ್ತಿರುವುದನ್ನು ಪರಿಶೀಲಿಸಲು ಇಲಾಖೆ ಯಾವ ಕ್ರಮಗಳನ್ನು ಕೈಗೊಂಡಿದೆ; ಈ ಸಂಬಂಧ ಎಷ್ಟು ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ? | ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು Registered Vehicle Scrapping Policy ಯನ್ನು ಅಧಿಸೂಚನೆ ಸಂಖ್ಯೆ: GSR 29(E) dated 16-1-2023 ರಲ್ಲಿ ಜಾರಿಗೊಳಿಸಿದ್ದು ಸದರಿ ಯೋಜನೆಯಡಿ ಹಳೆಯ, ಅನರ್ಹ ಹಾಗೂ ಮಾಲಿನ್ಯಕಾರಕ ವಾಹನಗಳನ್ನು ಹಂತ ಹಂತವಾಗಿ ತೆಗೆದುಹಾಕಿ ಅವುಗಳ ಸ್ಥಾನದಲ್ಲಿ ಹೊಸದಾಗಿ ಇಂಧನ ಸಾಮರ್ಥ್ಯವುಳ್ಳ ವಾಹನಗಳಿಗೆ ಬದಲಾಯಿಸುವ ದೃಷ್ಟಿಯಿಂದ ಕೇಂದ್ರ ಮೋಟಾರು ವಾಹನಗಳ ನಿಯಮ 1989ರ ನಿಯಮ 52ಎ ರನ್ವಯ 15 ವರ್ಷ ಮೇಲ್ಪಟ್ಟ ಸರ್ಕಾರಿ/ ನಿಗಮ/ ಮಂಡಳಿಗಳಲ್ಲಿರುವ ನೋಂದಾಯಿತ ವಾಹನಗಳ ನೋಂದಣಿಯನ್ನು ಕಡ್ಡಾಯವಾಗಿ ನಾಶಪಡಿಸಬೇಕಾಗಿರುತ್ತದೆ.<br>ಕೇಂದ್ರ ಸರ್ಕಾರದ ಅಧಿಸೂಚನೆಯಂತೆ, ಕರ್ನಾಟಕ ರಾಜ್ಯದಲ್ಲಿಯೂ ಅಧಿಸೂಚನೆ ಸಂಖ್ಯೆ: TD 191 TDO 2022 ದಿನಾಂಕ:30.12.2022 ರಲ್ಲಿ Registered Vehicle Scraping Policy Karnataka-2022 ಅನ್ನು ಜಾರಿಗೊಳಿಸಲಾಗಿರುತ್ತದೆ.<br>ಸದರಿ ಯೋಜನೆಯನ್ವಯ ಅನುಮೋದನೆ ಪಡೆದಿರುವಂತಹ ಕೇಂದ್ರಗಳಲ್ಲಿ ಖಾಸಗಿ ವಾಹನ ಮಾಲೀಕರು ತಮ್ಮ ವಾಹನಗಳನ್ನು ಸ್ವ-ಇಚ್ಛೆಯಿಂದ ಗುಜರಿಗೆ (scrapping) ಹಾಕಲು ಅವಕಾಶ ಕಲ್ಪಿಸಲಾಗಿರುತ್ತದೆ. |

**ಟಿಡಿ 5 ಟಿಡಿಕ್ಯೂ 2026**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.